**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**

**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆ: ಎಸ್.ಸಿ.87/2022**

**ದಿನಾಂಕ: 07.04.2025**

**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪ್ರಾ.ಸಾ: 5 (ಚಾ.ಸಾ.10)**

| | | |
|---|---|---|
| **ಹೆಸರು** | **:** | **ಡಾ. ಶ್ರೀನಿವಾಸ್ ಪ್ರಭು** |
| **ತಂದೆಯ ಹೆಸರು** | **:** | **ಚನ್ನಯ್ಯ** |
| **ವಯಸ್ಸು** | **:** | **66 ವರ್ಷ** |
| **ಉದ್ಯೋಗ** | **:** | **ನಿವೃತ್ತ ವೈದ್ಯರು** |
| **ವಾಸ ಸ್ಥಳ** | **:** | **ಬೆಂಗಳೂರು** |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಸುಮಾರು 30 ವರ್ಷಗಳವರೆಗೆ ನಾನು ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಲ್ಲಿ ವಿವಿಧ ಹುದ್ದೆಗಳಲ್ಲಿ ವೈದ್ಯನಾಗಿ ಕೆಲಸ ಮಾಡಿದ್ದೇನೆ. ದಿ:30.10.2018 ರಲ್ಲಿ ನಾನು ನಿವೃತ್ತಿ ಹೊಂದಿದ್ದೇನೆ.

2. ಈ ಕೇಸಿನ ಗಾಯಾಳು ಸೌಮ್ಯ ಕೆ.ಟಿ. ಇವರು ನಮ್ಮ ಆಸ್ಪತ್ರೆಗೆ ದಾಖಲಾದಾಗ ನಾನು ಪ್ರೊಫೆಶರ್ ಆಗಿದ್ದೆನು. ದಿ:13.06.2017 ರಂದು ನಮ್ಮ ಆಸ್ಪತ್ರೆಗೆ ರಾತ್ರಿ 07.36 ಗಂಟೆಗೆ ಸೌಮ್ಯ ಕೆ.ಟಿ. ಕೋಂ ಚಲುವರಾಜು ರವರನ್ನು ವಿಂಟಿಲೇಟರ್ ಆ್ಯಂಬುಲೆನ್ಸ್ ನಲ್ಲಿ ನಾಗರಬಾವಿಯ ಪೋರ್ಟಿಸ್ ಆಸ್ಪತ್ರೆಯಿಂದ ನಮ್ಮ ಆಸ್ಪತ್ರೆಗೆ ಅವರು ವಿಷ ಕುಡಿದಿದ್ದಾರೆ ಎಂದು ಕರೆದುಕೊಂಡು ಬಂದಿದ್ದರು. ಅವರ ಸಂಬಂಧಿಕರಾದ ನಾಗೇಶ್ ಎನ್ನುವವರು ಆ್ಯಂಬುಲೆನ್ಸ್ ನಲ್ಲಿ ಅವರನ್ನು ಕರೆ ತಂದಿದ್ದರು.

3. ನಮ್ಮ ಆಸ್ಪತ್ರೆಗೆ ರೋಗಿಯು ಬಂದಾಗ ಅವರಿಗೆ ಪ್ರಜ್ಞೆಯು ಇತ್ತು, ಅವರು 1 ವಾರ ಪೋರ್ಟಿಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ವೆಂಟಿಲೇಟರ್

ನಲ್ಲಿ ಬಂದಿದ್ದರು. ಆ ಕಾರಣಕ್ಕೆ ನಾವು ಅವರನ್ನು ಐ.ಸಿ.ಯು.ಗೆ ಶಿಫ್ಟ್ ಮಾಡಿದೆವು. ರೋಗಿಯು ಸಂಬಂಧಿಕರು ಹೇಳಿದ ಪ್ರಕಾರ ದಿ:**07.06.2017** ರಂದು ರಾತ್ರಿ **10.00** ಗಂಟೆಗೆ ರೋಗಿಯ ಮನೆಯಲ್ಲಿ ಕೀಟನಾಶಕವನ್ನು ಸೇವಿಸಿರುವುದಾಗಿ ತಿಳಿಸಿದರು. ರೋಗಿಯನ್ನು ಮೊದಲು ರಾಜರಾಜೇಶ್ವರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಐ.ಸಿ.ಯು. ಸೌಲಭ್ಯವಿಲ್ಲವೆಂದು, ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದರಿಂದ ರೋಗಿಯನ್ನು ನಾಗರಬಾವಿಯ ಪೋರ್ಟಿಸ್ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದರು.

**4.** ನಾಗರಬಾವಿಯ ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟರಲ್ಲಿ ರೋಗಿಯು ಪ್ರಜ್ಞೆ ತಪ್ಪಿದ್ದರು. ಅದೇ ದಿವಸ ರೋಗಿಗೆ ಕಾರ್ಡಿಯಾಕ್ ಅರೆಸ್ಟ್ ಆಗಿದ್ದು ರಿವೈವ್ ಮಾಡಿ ವೆಂಟಿಲೇಟರ್ ನಲ್ಲಿ ಇಟ್ಟಿದ್ದರು. ನಮ್ಮ ಆಸ್ಪತ್ರೆಯಲ್ಲಿ ರೋಗಿಗೆ ಇನ್ನೂ **2** ದಿವಸ ಚಿಕಿತ್ಸೆ ಕೊಟ್ಟಿದ್ದೇವೆ. ರೋಗಿಗೆ ಪ್ರಜ್ಞೆ ಇತ್ತು, ಪಲ್ಸ್ ಮತ್ತು ಬಿ.ಪಿ. ನಾರ್ಮಲ್ ಇತ್ತು. ರೋಗಿಯು ಕೀಟನಾಶಕ ಸೇವಿಸಿದ್ದರಿಂದ ಮಸಲ್ ವೀಕನೆಸ್ ಆಗಿತ್ತು. ಆ ಕಾರಣಕ್ಕೆ ರೋಗಿಗೆ ವೆಂಟಿಲೇಟರ್ ನಲ್ಲಿಯೇ ಚಿಕಿತ್ಸೆಯನ್ನು ಮುಂದುವರೆಸಿದೆವು. ರೋಗಿಗೆ ತಾನಾಗಿಯೇ ಉಸಿರಾಡಲು ಆಗುತ್ತಿರಲಿಲ್ಲ.

**5.** ನಮ್ಮ ಆಸ್ಪತ್ರೆಯಿಂದ ರೋಗಿಯು ದಿ:**20.07.2017** ರಂದು ಬಿಡುಗಡೆ ಹೊಂದಿದ್ದಾರೆ. ಈ ಬಗ್ಗೆ ನಮ್ಮ ಆಸ್ಪತ್ರೆಯಿಂದ ಡಿಸ್ ಚಾರ್ಜ್ ಸಮ್ಮರಿಯನ್ನು ಪೊಲೀಸರಿಗೆ ಕೊಟ್ಟಿದ್ದೇವೆ. ಸಾಕ್ಷಿಯು ಡಿಸ್ ಚಾರ್ಜ್ ಸಮ್ಮರಿಯ ದೃಢೀಕೃತ ನಕಲನ್ನು ಗುರುತಿಸಿದ್ದು, ಅದನ್ನು ನಿಪಿ.**12** ಎಂದು ಗುರುತಿಸಲಾಯಿತು. ನಿಪಿ.**12** ಕ್ಕೆ ನನ್ನ ಅಸಿಸ್ಟೆಂಟ್ ಬೃಂದಾ ಎನ್ನುವವರು ರುಜು ಮಾಡಿದ್ದಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಹೆಚ್.ಜಿ., ವಕೀಲರಿಂದಃ**

**6.** ರೋಗಿಯು ರಾಜರಾಜೇಶ್ವರಿ ಆಸ್ಪತ್ರೆಗೆ ಮತ್ತು ಪೋರ್ಟಿಸ್ ಆಸ್ಪತ್ರೆಗೆ ಹೋಗಿದ್ದ ಬಗ್ಗೆ ನಾನು ಇಲ್ಲಿ ದಾಖಲೆಯನ್ನು ಹಾಜರುಪಡಿಸಿಲ್ಲ. ನಿಪಿ.**12**ರಲ್ಲಿ

ರೋಗಿಯು ರಾಜರಾಜೇಶ್ವರಿ ಆಸ್ಪತ್ರೆಗೆ ಮತ್ತು ಪೋರ್ಟಿಸ್ ಆಸ್ಪತ್ರೆಗೆ ಹೋಗಿದ್ದ ಬಗ್ಗೆ ನಮೂದನೆಯು ಇಲ್ಲ, ಅದು ಕೇಸ್ ಶೀಟ್ ನಲ್ಲಿ ಇದೆ. ನಾಗೇಶ್ ರವರು ಹೇಳಿದ ಹಿನ್ನೆಲೆಯನ್ನು ಸಿ.ಎಂ.ಒ.ರವರು ಕ್ಯಾಶ್ಯುಯಲ್ಟಿ ರಿಜಿಸ್ಟರ್ ನಲ್ಲಿ ಬರೆದುಕೊಂಡಿರುತ್ತಾರೆ. ಸಾಮಾನ್ಯವಾಗಿ ವಿಷ ಕುಡಿದಿರುವ ಕೇಸಿನಲ್ಲಿ ರೋಗಿಯು ದಾಖಲಾಗಿರುವ ಬಗ್ಗೆ ಹತ್ತಿರದ ಪೊಲೀಸ್ ಠಾಣೆಗೆ ವಿಷಯ ತಿಳಿಸುತ್ತೇವೆ ಎಂದರೆ ಸರಿ. ಈ ಕೇಸಿನಲ್ಲಿ ನಮ್ಮ ಆಸ್ಪತ್ರೆಯವರು ಸೆಂಟ್ರಲ್ ಪೊಲೀಸ್ ಠಾಣೆಗೆ ಮಾಹಿತಿ ಕೊಟ್ಟಿದ್ದಾರೆ.

**7.** ನಿಪಿ.**12**ರಲ್ಲಿ ರೋಗಿಯು ಯಾವ ಕಾರಣಕ್ಕೆ ವಿಷ ಕುಡಿದಿದ್ದಾರೆ ಎಂದು ನಮೂದಿಸಿಲ್ಲ. ನಾನು ಪೊಲೀಸರಿಗೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಆಸ್ಪತ್ರೆಗೆ ರೋಗಿಯು ದಾಖಲಾಗಿಲ್ಲ, ನಾವು ಚಿಕಿತ್ಸೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ವಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)

<u>ವಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ</u>